**14/02/22** ಪ್ರಾತಃಮುರುಳಿ ಓಂಶಾಂತಿ ಬಾಪ್ದಾದಾ ಮಧುಬನ

"ಮಧುರ ಮಕ್ಕಳೇ - ತಿಳುವಳಿಕೆಯುಳ್ಳವರಾಗಿ ನಡೆದಡುತ್ತಾ-ಓಡಾಡುತ್ತಾ ಎಲ್ಲಿಯಾದರೂ ಸೇವೆ ಮಾಡುತ್ತಿರಿ, ತಂದೆಯ ಪರಿಚಯ ಕೊಡಿ, ಸೇವೆಯ ಅಭಿರುಚಿ ಇಟ್ಟುಕೊಳ್ಳಬೇಕು"

ಪ್ರಶ್ನೆ: ಮಕ್ಕಳ ಬುದ್ಧಿಯಲ್ಲಿ ಯಾವ ತಿಳುವಳಿಕೆ ಬಂದು ಬಿಟ್ಟಾಗ ತಮ್ಮದೆಲ್ಲವನ್ನು ಸಫಲ ಮಾಡಿಕೊಳ್ಳುತ್ತಾರೆ?

ಉತ್ತರ: ಇದೆಲ್ಲವೂ ಸಮಾಪ್ತಿ ಆಗುವುದಿದೆ, ತಂದೆಗೆ ಎರಡು ಆಣೆ ಕೊಡುವುದರಿಂದ ಮಹಲ್ ಸಿಗುತ್ತದೆ....... ಈ ಅರಿವು ಯಾರ ಬುದ್ಧಿಯಲ್ಲಿ ಬರುತ್ತದೆ, ಅವರು ತಮ್ಮದೆಲ್ಲವನ್ನು ಈಶ್ವರೀಯ ಕಾರ್ಯದಲ್ಲಿ ಸಫಲ ಮಾಡಿಕೊಳ್ಳುತ್ತಾರೆ. ಬಡವರೇ ಬಲಿಹಾರಿ ಆಗುತ್ತಾರೆ. ತಂದೆ ದಾತನಾಗಿರುವ ಕಾರಣ ಅವರು ನಿಮಗೆ ಸ್ವರ್ಗದ ರಾಜ್ಯಭಾಗ್ಯವನ್ನು ಕೊಡುತ್ತಾರೆ, ಅವರು ನಮ್ಮಿಂದ ಏನನ್ನು ತೆಗೆದುಕೊಳ್ಳುವುದಿಲ್ಲ.

ಗೀತೆ: ಪ್ರಿಯತಮನೇ ಬಂದು ಮಿಲನ ಮಾಡು...........

ಓಂ ಶಾಂತಿ. ಪ್ರಿಯತಮೆಯರು ಅರ್ಥಾತ್ ಭಕ್ತರು, ಮಧುಮಗಳು ಅರ್ಥಾತ್ ಸಜನಿಯರು. ಭಕ್ತರು ಪ್ರಿಯತಮ ಅಥವಾ ಸಾಜನ್ರವರನ್ನು ಕರೆಯುತ್ತಾರೆ ಅರ್ಥಾತ್ ಸ್ತ್ರೀ ಪುರುಷರೆಲ್ಲರೂ ಸೇರಿ ತಂದೆಯನ್ನು ಕರೆಯುತ್ತಾರೆ. ಎಷ್ಟೊಂದು ಆತ್ಮಗಳು ಭಕ್ತರಿದ್ದಾರೆ, ಓ ಪ್ರಿಯತಮನೇ ಬಂದು ನಮ್ಮನ್ನು ಸೇರಿ ಎಂದು ಕರೆಯುವಾಗ ಅಗತ್ಯವಾಗಿ ಪ್ರಿಯತಮೆಯರಿಗೆ ಯಾರಾದರೂ ಪ್ರಿಯತಮ ಇರಬೇಕೆಂದು ಸಿದ್ಧವಾಗುತ್ತದೆ. ಎಲ್ಲರೂ ಒಬ್ಬ ಪರಮಪಿತ ಪರಮಾತ್ಮನನ್ನು "ಬಾ" ಎಂದು ಕರೆಯುತ್ತಾರೆ. ಓ ತಂದೆ ನಾವು ನಿಮ್ಮನ್ನು ಬಹಳ ನೆನಪು ಮಾಡುತ್ತೇವೆ, ಇದರ ಸ್ಮರಣಾರ್ಥವು ತುಂಬಾ ಮಾಡುತ್ತಾರೆ, ಆದರೆ ಅದೆಲ್ಲವೂ ಮನುಷ್ಯರ ನೆನಪಾರ್ಥವಾಗಿದೆ. ಶ್ರೀ ಲಕ್ಷ್ಮೀ ನಾರಾಯಣ, ರಾಮ ಸೀತಾ ಮೊದಲಾದ ದೇವತೆಗಳನ್ನು ಬಹಳಷ್ಟು ಜನ ನೆನಪು ಮಾಡುತ್ತಾರೆ, ಏಕೆಂದರೆ ಮನುಷ್ಯರಿಗಿಂತ ದೇವತೆಗಳು ಶ್ರೇಷ್ಠರಾಗಿರುವ ಕಾರಣ ಮನುಷ್ಯರು ದೇವತೆಗಳನ್ನು ಪೂಜೆ ಮಾಡುತ್ತಾರೆ. ನಂಬರ್ವಾರ್ ಶ್ರೇಷ್ಠರು ಇರುವಂತೆ, ನಂಬರ್ವಾರ್ ಕನಿಷ್ಟರೂ ಇರಬೇಕಾಗುತ್ತದೆ. ಶ್ರೇಷ್ಠಾತಿ ಶ್ರೇಷ್ಠ ಎಂದು ಒಬ್ಬ ಭಗವಂತನಿಗೆ ಹೇಳಲಾಗುತ್ತದೆ ಎನ್ನುವುದನ್ನು ಎಲ್ಲರೂ ತಿಳಿದುಕೊಂಡಿದ್ದಾರೆ. ನಂತರ ಬ್ರಹ್ಮಾ, ವಿಷ್ಣು, ಶಂಕರರು ಶ್ರೇಷ್ಠರಾಗಿದ್ದಾರೆ, ಮತ್ತೆ ಬ್ರಹ್ಮಾ ಹಾಗು ಜಗದಂಬಾ ಶ್ರೇಷ್ಠರಾಗಿರುವರು. ಮುಖ್ಯವಾದುದು ಪರಮಪಿತ ಪರಮಾತ್ಮನ ಶ್ರೇಷ್ಠತೆ ಆಗಿದೆ. ಸರ್ವ ಶ್ರೇಷ್ಠ ತಂದೆಯಿಂದ ಸರ್ವ ಶ್ರೇಷ್ಠ ಆಸ್ತಿ ಪ್ರಾಪ್ತಿ ಆಗುವುದೆಂದು ಕೇವಲ ಮಕ್ಕಳ ಬುದ್ಧಿಯಲ್ಲಿ ಮಾತ್ರ ಇರುತ್ತದೆ. ಆದರೆ ಇಂತಹ ತಂದೆಯನ್ನು ಯಾರೂ ತಿಳಿದುಕೊಂಡಿಲ್ಲ. ಸ್ವಯಂ ತಂದೆ ಬಂದು ತನ್ನ ಪರಿಚಯವನ್ನು ನೀಡಬೇಕಾಗುವುದು. ನಾನು ನಿಮ್ಮ ವಿನಃ ಬೇರೆ ಯಾರೊಂದಿಗೂ ಮಿಲನ ಮಾಡುವುದಿಲ್ಲವೆಂದು ತಂದೆ ತಿಳಿಸುತ್ತಾರೆ. ಅನೇಕರು ಮಹಾತ್ಮರೊಂದಿಗೆ ಮಿಲನ ಮಾಡಬೇಕೆಂದು ಬರುತ್ತಾರೆ, ಆದರೆ ಇಲ್ಲಿ ಆ ಮಾತೇ ಇಲ್ಲ. ಬಾಕಿ ಇಲ್ಲಿ ತಂದೆ ಮಕ್ಕಳ ಸಂಬಂಧವಾಗಿದೆ. ಬೇರೆ ಯಾರಿಗಾದರೂ ಅನ್ಯತಾ ಕೆಲಸವಿದ್ದರೇ ಬೇರೆ ಮಾತಾಗಿದೆ. ತಂದೆ ಮುರಳಿಯನ್ನು ತನ್ನ ಮಕ್ಕಳ ಮುಂದೆ ಮಾತ್ರ ನುಡಿಸುತ್ತಾರೆ. ಪ್ರದರ್ಶನದಲ್ಲೂ ಸಹ ಇವರು ಸರ್ವರಿಗೂ ತಂದೆ ಆಗಿದ್ದಾರೆಂದು ಸಿದ್ಧ ಮಾಡಿ ಎಲ್ಲರಿಗೂ ತಿಳಿಸಬೇಕು. ನೀವು ಪರಮಾತ್ಮನಿಗೆ ನಾಮ, ರೂಪ, ದೇಶ, ಚಿತ್ರ ಎಲ್ಲವೂ ಇರುವುದೆಂದು ತಿಳಿಸಿಕೊಡುತ್ತೀರಿ, ಆದರೆ ಅವರು ನಾಮ ರೂಪದಿಂದ ನ್ಯಾರ (ಭಿನ್ನ) ಎಂದು ಹೇಳುವರು. ಪರಮಾತ್ಮನನ್ನು ಕರೆಯುತ್ತಾರೆ ಅಂದಮೇಲೆ ಹೇಗೆ ಆತ್ಮ ಪರಂಧಾಮದಿಂದ ಈ ಸೃಷ್ಟಿಗೆ ಬರಬೇಕಾಗುತ್ತದೆ, ಹಾಗೆಯೇ ಪರಮಾತ್ಮನೂ ಸಹ ಬರುತ್ತಾರೆ. ಶಿವನ ಮಂದಿರದಲ್ಲಿ ಬಸವನನ್ನು ತೋರಿಸುತ್ತಾರೆ. ಅದನ್ನು ನಂದಿ ವಾಹನವೆಂದು ಕರೆಯುವರು, ಇದರಿಂದ ಶಿವ ಪರಮಾತ್ಮ ಈ ಸೃಷ್ಟಿಯಲ್ಲಿ ಅವತರಣೆ ಆಗುವರೆಂದು ಸಿದ್ಧವಾಗುತ್ತದೆ. ಹಾಗಾದರೆ ಅವರು ಬಂದಿದ್ದಾರೆಯೇ ಅಥವಾ ಇಲ್ಲವೋ ಎಂದು ಏಕೆ ಹೇಳುತ್ತೀರಿ? ಮನುಷ್ಯರು ಎಷ್ಟೊಂದು ಬುದ್ಧಿಯಿಲ್ಲದವರಾಗಿದ್ದಾರೆಂದರೆ, ಬಸವನ ಭೃಕುಟಿಯಲ್ಲಿ ಶಿವನನ್ನು ತೋರಿಸುತ್ತಾರೆ. ಪರಮಾತ್ಮನೂ ಸಹ ಅಗತ್ಯವಾಗಿ ಬ್ರಹ್ಮನ ಭೃಕುಟಿಯ ಮಧ್ಯದಲ್ಲಿರುತ್ತಾರೆ. ಪರಮಾತ್ಮ ಬರುವುದಾದರೆ ಬ್ರಹ್ಮನ ಭೃಕುಟಿಯಲ್ಲಿ ಬಂದು ವಿರಾಜಮಾನವಾಗುತ್ತಾರೆ. ನೀವು ಪ್ರದರ್ಶನಿಯಲ್ಲಿ ನಂದೀಗಣವೆಂದು ಯಾರಿಗೆ ಹೇಳಲಾಗುತ್ತದೆ ಎನ್ನುವುದನ್ನು ತಿಳಿಸಿಕೊಡಬೇಕು. ನಾನು ಮಕ್ಕಳಿಗೆ ಮಾತ್ರ ತಿಳಿಸಿಕೊಡುತ್ತೇನೆಂದು ತಂದೆ ತಿಳಿಸುತ್ತಾರೆ. ಮನುಷ್ಯರು ಪರಮಪಿತ ಪರಮಾತ್ಮನೆಂದು ಹೇಳುವರು, ಆದರೆ ತಂದೆಯ ಹೆಸರು ಏನಾಗಿದೆ? ಯಾರೂ ಸಹ ಹೇಳುವುದಿಲ್ಲ. ಲೌಕಿಕ ತಂದೆಯ ಹೆಸರಾದರೆ ತಕ್ಷಣ ತಿಳಿಸಿ ಬಿಡುತ್ತಾರೆ ಆದರೆ ಶಿವ ತಂದೆಗೆ ಅನೇಕ ಹೆಸರು ಇಟ್ಟಿರುವ ಕಾರಣ ಮನುಷ್ಯರು ಗೊಂದಲವಾಗುತ್ತಾರೆ. ವಾಸ್ತವದಲ್ಲಿ ಪರಮಾತ್ಮನ ಹೆಸರು ಒಂದೇ ಆಗಿರಬೇಕು. ಈ ಎಲ್ಲಾ ತಿಳುವಳಿಕೆಯನ್ನು ತಂದೆಯೇ ನೀಡುವರು, ಮನುಷ್ಯರು ಈ ಸಮಯದಲ್ಲಿ ತುಚ್ಚ ಬುದ್ಧಿಯವರಾಗಿರುವ ಕಾರಣ ತಂದೆಯನ್ನು ತಿಳಿದುಕೊಂಡಿಲ್ಲ. ವೇದ ಶಾಸ್ತ್ರ ಇತ್ಯಾದಿಗಳನ್ನು ಓದುವುದು ಭಕ್ತಿಮಾರ್ಗವಾಗಿದೆ. ಭಕ್ತಿಯಿಂದ ಭಗವಂತನ ಪ್ರಾಪ್ತಿಯಾಗುತ್ತದೆ ಎಂದು ತಿಳಿದುಕೊಳ್ಳುತ್ತಾರೆ. ಭಕ್ತರೂ ಸಹ ಮನುಷ್ಯರೇ ಆಗಿದ್ದಾರೆ. ಅವರಿಗೆ ಭಗವಂತನ ಪ್ರಾಪ್ತಿಯಾಗಬೇಕಾಗಿದೆ, ಆದರೆ ಯಾವಾಗ ಭಕ್ತರನ್ನು ಭಗವಂತ ಮಿಲನ ಮಾಡುವರೆಂದು ಯಾರೂ ತಿಳಿದುಕೊಂಡಿಲ್ಲ. ಭಕ್ತಿ ಮಾರ್ಗದಲ್ಲಿ ಯಾರಿಗಾದರೂ ಸಾಕ್ಷಾತ್ಕಾರವಾದರೆ ಭಗವಂತ ಪ್ರಾಪ್ತಿಯಾಗಿ ಬಿಟ್ಟರೆಂದು ತಿಳಿದುಕೊಳ್ಳುತ್ತಾರೆ. ಇದರಿಂದ

ಮುಕ್ತಿಯು ಪ್ರಾಪ್ತಿ ಆಯಿತೆಂದು ಸಂತುಷ್ಟ ಪಡುತ್ತಾರೆ. ಏಕೆಂದರೆ ಭಗವಂತನಿಂದ ಮಾತ್ರ ಮುಕ್ತಿ ಪ್ರಾಪ್ತಿ ಆಗುವುದೆಂದು ತಿಳಿದುಕೊಂಡಿರವರು. ಆದರೆ ಅವರು ಸರ್ವರಿಗೂ ಮುಕ್ತಿ ಜೀವನ್ಮುಕ್ತಿ ಕೊಡುವಂತಹ ದಾತ ಆಗಿದ್ದಾರೆ. ಪತಿತರನ್ನು ಪಾವನ ಮಾಡುವವರು, ದುಃಖಹರ್ತಾ-ಸುಖಕರ್ತಾ ಆಗಿದ್ದಾರೆ.

ತಂದೆಯಂತೂ ದಾತ ಆಗಿದ್ದಾರೆ. ಅವರು ನಮ್ಮ ಎರಡು ಕಣಕ್ಕೆ ಬದಲು ಮಹಲ್ ಹಾಗೂ ಸಂಪೂರ್ಣ ಸ್ವರ್ಗದ ರಾಜ್ಯ ಭಾಗ್ಯವನ್ನು ಕೊಡುತ್ತಾರೆ. ಈಗ ಎಲ್ಲವೂ ಸಮಾಪ್ತಿ ಆಗುವುದಿದೆ, ಆದ್ದರಿಂದ ಈ ಕಾರ್ಯದಲ್ಲಿ ತಮ್ಮದೆಲ್ಲವನ್ನು ತೊಡಗಿಸಿ ಸಫಲ ಮಾಡಿಕೊಳ್ಳಬೇಕೆಂದು ತಂದೆ ತಿಳಿಸುತ್ತಿದ್ದಾರೆ. ನಂತರ ನಿಮಗೆ ಭವಿಷ್ಯದಲ್ಲಿ ಅದರ ಫಲ ಪ್ರಾಪ್ತಿಯಾಗುತ್ತದೆ. ಶ್ರೀಮಂತರು ಭಗವಂತನನ್ನು ಪ್ರಾಪ್ತಿ ಮಾಡಿಕೊಳ್ಳುವುದಿಲ್ಲ, ಹಾಗೂ ಬಲಿಹಾರಿ ಆಗುವುದಿಲ್ಲ. ಬಡ ಮಕ್ಕಳು ಸಂಪೂರ್ಣವಾಗಿ ಬಲಿಹಾರಿ ಆಗುತ್ತಾರೆ. ಒಂದುವೇಳೆ ಯಾರಾದರೂ ತಿಳುವಳಿಕೆ ಇರುವವರು ಮಾರ್ಗದಲ್ಲಿ ನಡೆಯುತ್ತಾ ಸೇವೆ ಮಾಡಬಹುದು. ನಡೆಯುತ್ತಾ, ಓಡಾಡುತ್ತಾ ಮೊದಲು ಯಾರಿಗಾದರೂ ಸ್ನೇಹಿತರಾಗಿ ನಂತರ ಕುಳಿತು ಜ್ಞಾನ ಹೇಳಬೇಕು. ಈ ಜ್ಞಾನ ತುಂಬಾ ಸಹಜವಾಗಿದೆ. ಅವರನ್ನು ಈ ರೀತಿ ಕೇಳಬೇಕು - ನೀವು ಪರಮಪಿತ ಪರಮಾತ್ಮನ ಹೆಸರನ್ನು ಎಂದಾದರೂ ಕೇಳಿದ್ದೀರಾ? ಇದೆಷ್ಟು ಉತ್ತಮವಾದ ಜ್ಞಾನವಾಗಿದೆ. "ಪರಮಪಿತ" ಎಂದು ಹೇಳುವುದರಿಂದ ಅವರು ಸರ್ವರಿಗೂ ಪಿತನಾಗಿ ಬಿಡುತ್ತಾರೆ. ಹೇಗೆ ಚೇಳು ಮೃದುವಾದ ಸ್ಥಾನವನ್ನು ನೋಡಿ ಕುಟುಕುತ್ತದೆ. ಹಾಗೆಯೇ ನೀವೂ ಸಹ ಅದೇ ಕರ್ತವ್ಯವನ್ನು ಮಾಡಬೇಕು. ಅರ್ಥಾತ್ ಆತ್ಮಗಳನ್ನು ತಮ್ಮ ಸ್ನೇಹಿತರನ್ನಾಗಿ ಮಾಡಿಕೊಂಡು ಜ್ಞಾನವನ್ನು ತಿಳಿಸಬೇಕು. ಈ ರೀತಿ ಎಲ್ಲರಿಗೂ ರಾಜಯೋಗವನ್ನು ಕಲಿಸಿದಾಗ ಸತ್ಯಯುಗದಲ್ಲಿ ರಾಜಕುಮಾರ ರಾಜಕುಮಾರಿ ಆಗುತ್ತಾರೆ. ಅಲ್ಲಿ ನಿಮಗೆ ಸುಂದರವಾದ ಮಕ್ಕಳು ಪ್ರಾಪ್ತಿ ಆಗುತ್ತಾರೆ. ತಂದೆಯಿಂದ ಆಸ್ತಿ ಪಡೆಯುವುದು ತುಂಬಾ ಸಹಜವಾಗಿದೆ ಹಾಗೂ ಬುದ್ಧಿಯಿಂದ ತಿಳಿದುಕೊಳ್ಳುವಂತಹದ್ದಾಗಿದೆ, ಬಾಕಿ ಸಾಕ್ಷಾತ್ಕಾರವಂತೂ ಸಾಮಾನ್ಯ ಮಾತಾಗಿದೆ ಎಂದು ತಿಳಿಸಿಕೊಡಬೇಕು. ಒಬ್ಬೊಬ್ಬರಿಗೆ ಒಂದೊಂದು ರೀತಿಯಲ್ಲಿ ಸಾಕ್ಷಾತ್ಕಾರವಾಗುತ್ತದೆ. ಅದು ಕೇವಲ ನಮ್ಮ ಗುರಿ-ಉದ್ದೇಶವನ್ನು ತಿಳಿದುಕೊಳ್ಳುವ ಸಲುವಾಗಿ ಸಾಕ್ಷಾತ್ಕಾರ ಆಗುತ್ತದೆಯೇ ವಿನಃ ನಾವು ಅದೇ ರೀತಿ ಆಗಿ ಬಿಡುತ್ತೇವೆಂದು ಅರ್ಥವಲ್ಲ. ಆ ರೀತಿ ಆಗಬೇಕೆಂದರೆ ತಂದೆ ತಿಳಿಸುತ್ತಾರೆ ನನ್ನನ್ನು ನೆನಪು ಮಾಡಿ ಹಾಗೂ ಪವಿತ್ರರಾಗಿ ಆಗ ಅಂತಹ ಪದವಿಯನ್ನು ಪಡೆದುಕೊಳ್ಳಬಹುದು ಎಂದು ಬೇರೆಯವರಿಗೆ ತಿಳಿಸಿಕೊಡಬೇಕು. ನೀವು ಗೃಹಸ್ಥದಲ್ಲಿ ಜೊತೆಯಲ್ಲಿದ್ದು ಪದವಿ ಪಡೆದುಕೊಳ್ಳುವುದು ತುಂಬಾ ಶ್ರೇಷ್ಠ ಗುರಿಯಾಗಿದೆ. ಎಲ್ಲಾ ಸಂಗವನ್ನು ಬಿಟ್ಟು ಒಬ್ಬ ತಂದೆಯ ಸಂಗದಲ್ಲಿ ಬುದ್ಧಿಯನ್ನು ಜೋಡಿಸುವುದು ಶ್ರಮದ ಮಾತಾಗಿದೆ. ಸನ್ಯಾಸಿಗಳಂತೂ ಎಲ್ಲವನ್ನು ತೊರೆದು ಹೊರಟು ಹೋಗುತ್ತಾರೆ. ಇಲ್ಲಿ ಪರಸ್ಪರ ಗೃಹಸ್ಥದಲ್ಲಿದ್ದು ಈ ಹಳೆಯ ಪ್ರಪಂಚ ವಿನಾಶವಾಗುವುದೆಂದು ಬುದ್ಧಿಯಿಂದ ತಿಳಿದುಕೊಂಡಿರಬೇಕು. ನಾವು ಮನೆಗೆ ಹಿಂತಿರುಗಿ ನಂತರ ನಾವು ಸ್ವರ್ಗದಲ್ಲಿ ಹೋಗಿ ರಾಜ್ಯ ಮಾಡುತ್ತೇವೆ. ಈ ಹಳೆಯ ಪ್ರಪಂಚ ಈಗ ವಿನಾಶ ಆಗಿಯೇ ಆಗುತ್ತದೆ. ಈ ರೀತಿ ಬುದ್ಧಿಯಲ್ಲಿ ಇಟ್ಟುಕೊಂಡು ಪುರುಷಾರ್ಥ ಮಾಡಬೇಕು. 8 ಗಂಟೆ ತಂದೆಯ ನೆನಪಿನ ಸೇವೆಯಲ್ಲಿರಬೇಕು. ಆದರೆ ಕೆಲವರು ಇದು ಹೇಗೆ ಸಾಧ್ಯ ಎಂದು ಕೇಳುತ್ತಾರೆ. ಭಕ್ತಿಮಾರ್ಗದಲ್ಲಿ ಒಂದು ವೇಳೆ ಕೃಷ್ಣನ ಭಕ್ತರಾಗಿದ್ದರೆ, ಅವರು ತಮ್ಮ ಬುದ್ಧಿಯನ್ನು ಎಲ್ಲಾ ಕಡೆಯಿಂದ ದೂರ ಮಾಡಿಕೊಂಡು ಒಬ್ಬ ಕೃಷ್ಣನ ನೆನಪು ಮಾಡುತ್ತಾರೆ. ರಾಮನ ಭಕ್ತರಾದರೆ ರಾಮನನ್ನು ನೆನಪು ಮಾಡುತ್ತಾರೆ. ರಾಮ ರಾಜಧಾನಿಯನ್ನು ನಿರಂತರವಾಗಿ ನೆನಪು ಮಾಡಿದಾಗ ಅಂತಿ ಮತಿ ಸೋ ಗತಿ ಆಗುತ್ತದೆ. ರಾಮನ ನೆನಪಿನಿಂದ ರಾಮನ ರಾಜಧಾನಿಯಲ್ಲಿ ಹೋಗಬೇಕೆಂದರೆ ಶ್ರಮ ಪಡಬೇಕು. ಈ ರೀತಿಯ ಪುರುಷಾರ್ಥ ಮಾಡಿಸುವವರು ಪ್ರಪಂಚದಲ್ಲಿ ಯಾರೂ ಇಲ್ಲ. ಅಂತ್ಯ ಕಾಲದಲ್ಲಿ ಯಾರು ಸ್ತ್ರೀಯನ್ನು ನೆನಪು ಮಾಡುತ್ತಾರೆ...... ಎಂಬ ಶ್ಲೋಕವಿದೆ. ಒಂದುವೇಳೆ ಸನ್ಯಾಸಿ ಅಥವಾ ಗುರುಗಳನ್ನು ನೆನಪು ಮಾಡಿದರೂ ಸಹ ಅಂತಿ ಮತಿ ಸೋ ಗತಿ ಆಗುತ್ತದೆ.... ಯಾರಿಗಾದರೂ ನೀವು ಎಲ್ಲಿಗೆ (ಮುಕ್ತಿ-ಜೀವನ್ಮುಕ್ತಿ) ಹೋಗಲು ಇಷ್ಟ ಪಡುತ್ತೀರಿ? ಎಂದು ಕೇಳಬೇಕು. ಮನೆಗಂತೂ ಹಿಂತಿರುಗಬೇಕು, ಆದರೆಎಲ್ಲಿಗೆ? ಏಕೆಂದರೆ ಭಕ್ತಿಯಲ್ಲಿ ಒಬ್ಬ ಪರಮಾತ್ಮನನ್ನು ನೆನಪು ಮಾಡದ ಕಾರಣ ಆ ಭಕ್ತಿಯಲ್ಲಿ ಶಕ್ತಿಯಿಲ್ಲವಾಗಿದೆ. ಒಬ್ಬ ಪರಮಪಿತ ಪರಮಾತ್ಮ ಸರ್ವಶಕ್ತಿವಂತ ಆಗಿದ್ದಾರೆ. ಅವರ ಪಾತ್ರವೂ ಸಹ ನಾಟಕದಲ್ಲಿ ನಿಗಧಿಯಾಗಿದೆ. ಸರ್ವ ಶ್ರೇಷ್ಠ ತಂದೆಯನ್ನು ನೆನಪು ಮಾಡಿದಾಗ ಅವರ ದೇಶಕ್ಕೆ ನಾವು ಹೋಗಬಹುದು. ಸನ್ಯಾಸಿಗಳಿಗೆ ದೇವತೆಗಳೆಂದು ಎಂದಿಗೂ ಹೇಳುವುದಿಲ್ಲ. ಸನ್ಯಾಸಿಗಳು ದ್ವಾಪರಯುಗದಿಂದ ಮಾತ್ರ ಬರುತ್ತಾರೆ. ಸ್ವಯಂ ಭಗವಂತ ಬಂದು ಹೇಳುತ್ತಾರೆ-ಮಕ್ಕಳೇ ನನ್ನನ್ನು ನೆನಪು ಮಾಡಿ ಹಾಗೂ ಸೃಷ್ಟಿಚಕ್ರದ ಜ್ಞಾನವನ್ನು ತಿಳಿಸಿಕೊಟ್ಟಾಗ ನೀವು ಚಕ್ರವರ್ತಿ ರಾಜ ಆಗಿ ಬಿಡುತ್ತೀರಿ. ಈ ಜ್ಞಾನವನ್ನು ತಂದೆ ಹೇಳುವರೆಂದು ಚಿತ್ರಗಳಿಂದ ನೀವು ತಿಳಿಸಿಕೊಡಬಹುದು. ಶ್ರೇಷ್ಠಾತಿ ಶ್ರೇಷ್ಠ ನಿರಾಕಾರ ಭಗವಂತ ಅವರು ಮೂಲವತನದಲ್ಲಿ ಇರುತ್ತಾರೆ. ಆ ಮನೆಯೂ ಸಹ ಶ್ರೇಷ್ಠಾತಿ ಶ್ರೇಷ್ಠವಾಗಿದೆ. ದೇವತೆಗಳೂ ಸಹ ಅಲ್ಲಿಯೇ ಇರುತ್ತಾರೆ. ಸೂಕ್ಷ್ಮ ವತನದಲ್ಲಿ ಸೂಕ್ಷ್ಮ ದೇವತೆಗಳು ಇರುತ್ತಾರೆ, ಸೂಕ್ಷ್ಮ ಲೋಕದಲ್ಲಿ ಚಕ್ರ ಇರುವುದಿಲ್ಲ. ನಂತರ ಈ ಸಾಕಾರ ಸೃಷ್ಟಿಯಲ್ಲಿ ಲಕ್ಷ್ಮೀ-ನಾರಾಯಣರ ಮಂದಿರದಲ್ಲಿ ಹೆಚ್ಚು ಸಿರಿ-ಸಂಪತ್ತು ಇರುತ್ತದೆ. ಜಗದಂಬಾ ಜಗತ್ಪಿತನ ಮಂದಿರದಲ್ಲಿ ಹೆಚ್ಚಾಗಿ ಸಂಪತ್ತು ಇರುವುದಿಲ್ಲ. ಜಗದಂಬಾ ಮಂದಿರವಂತೂ ತುಂಬಾ ಸಾಧಾರಣ ಮಂದಿರವಾಗಿರುತ್ತದೆ. ಲಕ್ಷ್ಮೀ ಹಾಗೂ ಜಗದಂಬೆಯ ಮಂದಿರಕ್ಕೆ ಹಗಲು ರಾತ್ರಿಯ ಅಂತರವಿರುತ್ತದೆ. ಆದರೆ ಮನುಷ್ಯರಿಗೆ ಜಗದಂಬೆಯೇ ಶ್ರೀಲಕ್ಷ್ಮಿ ಆಗುತ್ತಾರೆ ಎಂದು ಗೊತ್ತಿಲ್ಲ. ಜಗದಂಬಾ ಸರಸ್ವತಿಯು ತುಂಬಾ ಸಾಧಾರಣ ಇರುವ ಕಾರಣ ಅವರ ಮಂದಿರವನ್ನು ಬಹಳ ಸಾಧಾರಣವಾಗಿ ಮಾಡಿದ್ದಾರೆಂದು ನಾವು ತಿಳಿದುಕೊಂಡಿದ್ದೇವೆ. ಬೇರೆ ಯಾರಿಗೂ ಗೊತ್ತಿಲ್ಲ. ಜಗದಂಬಾರವರನ್ನು ಕೆಲವು ಕಡೆ ಕಪ್ಪಾಗಿಯು ಮಾಡಿರುವರು. ಸಂಗಮದಲ್ಲಿ ನಾವು ರಾಜಯೋಗವನ್ನು ಕಲಿತು

ಭವಿಷ್ಯದಲ್ಲಿ ಲಕ್ಷ್ಮೀಯಾಗಿ ಎಷ್ಟೊಂದು ಸುಂದರವಾದ ಜೀವನ ಮಾಡುತ್ತೇವೆ. ಬ್ರಹ್ಮನಿಂದ ಸ್ಥಾಪನೆ ಎಂದು ಬರೆಯಲ್ಪಟ್ಟಿದೆ. ಆ ಸ್ಥಾಪನೆಯು ಈ ಸಮಯದಲ್ಲಿ ಜ್ಞಾನದ ಮೂಲಕ ನಡೆಯುತ್ತಿದೆ. ಉಳಿದಂತೆ ಗೋಮುಖದಲ್ಲಿ ಅಮೃತ ಇತ್ಯಾದಿಯಾಗಿ ಬರುವ ಮಾತಿಲ್ಲ. ಈ ಸಂಗಮಯುಗದಲ್ಲಿ ತಂದೆಯು ಕೃಷ್ಣನಿಗೆ ಆಸ್ತಿ ಕೊಡುವರು, ಸಂಗಮವಾದ ಕಾರಣ ಅವರು ಶಿವನಿಗೆ ಬದಲು ಕೃಷ್ಣನ ಹೆಸರು ಬರೆದು ಬಿಟ್ಟಿದ್ದಾರೆ. ಜಗದಂಬಾ ಈಗ ಲಕ್ಷ್ಮೀ ಆಗುತ್ತಾರೆ ಹಾಗು ಲಕ್ಷ್ಮಿಯೇ 84 ಜನ್ಮ ಪಡೆದು ಪುನಃ ಜಗದಂಬಾ ಆಗುತ್ತಾರೆ. ಈಗ ಜಗದಂಬಾ ಬ್ರಹ್ಮನ ಕುಲದವರಾಗಿದ್ದು ಭವಿಷ್ಯದಲ್ಲಿ ದೈವೀ ಕುಲದವರು ಆಗುತ್ತಾರೆ. ದೈವೀ ಕುಲದಿಂದ ಪುನಃ 84 ಜನ್ಮ ಪಡೆದು ಅಂತ್ಯದಲ್ಲಿ ಶೂದ್ರ ಕುಲದವರಾಗುತ್ತಾರೆ. ಎಷ್ಟೊಂದು ಉತ್ತಮವಾದ ಧಾರಣಾ ಯೋಗ್ಯ ಮಾತುಗಳಾಗಿವೆ, ಕಡಿಮೆ ಬುದ್ಧಿಯವರು ಧಾರಣೆ ಮಾಡಲಾಗುವುದಿಲ್ಲ. ಈ ರೀತಿ ಅನೇಕ ಸೇವಾಕೇಂದ್ರಗಳಿವೆ-ತಾವೇ ಕ್ಲಾಸನ್ನು ನಡೆಸಿಕೊಳ್ಳುತ್ತಾರೆ. ಆದುದರಿಂದ ಪರಮಪಿತ ಪರಮಾತ್ಮ ಮಕ್ಕಳಿಗೆ ತೀಕ್ಷ್ಣ ಬುದ್ಧಿಯುಳ್ಳ ವಿದ್ಯಾರ್ಥಿಗಳಾಗಬೇಕೆಂದು ತಿಳಿಸಿಕೊಡುತ್ತಾರೆ. ಸೇವಾಧಾರಿ ಮಕ್ಕಳನ್ನು ಬಾಬಾ ತುಂಬಾ ನೆನಪು ಮಾಡುತ್ತಾ ತನ್ನ ಬಳಿ ಕರೆದುಕೊಳ್ಳುತ್ತಾರೆ. ತಂದೆ ಇಂತಹ ಮಕ್ಕಳನ್ನು ನೆನಪು ಮಾಡುತ್ತಾರೆ. ಶಾಲೆಯಲ್ಲಿ ಕೆಲವರು ತೀಕ್ಷ್ಣ ಬುದ್ಧಿಯುಳ್ಳವರು, ಕೆಲವರು ಕಡಿಮೆ ಬುದ್ಧಿಯುಳ್ಳ ಮಕ್ಕಳಿರುತ್ತಾರೆ. ಆದರೆ ತಂದೆಗೆ ಎಲ್ಲರೂ ಮಕ್ಕಳೇ. ಎಲ್ಲರೂ ಮಕ್ಕಳಾಗಿದ್ದರೂ ಸಹ ಕೆಲವರು ಬಹಳ ಪಾಪ ಮಾಡುತ್ತಿರುತ್ತಾರೆ, ಆದ ಕಾರಣ ಪುಣ್ಯಾತ್ಮರು ಆಗುವುದಿಲ್ಲ. ಮತ್ತೆ ಮತ್ತೆ ಮಾಯೆಗೆ ವಶರಾಗಿ ಬೀಳುತ್ತಿರುತ್ತಾರೆ. ಮಕ್ಕಳಿಗೆ ಎಷ್ಟೊಂದು ಗುಪ್ತ ಖುಷಿ ಇರಬೇಕು! ಕುರುಡರಿಗೆ ಊರುಗೋಲು ತಂದೆಯ ವಿನಃ ಬೇರೆಯಾರೂ ಆಗಲು ಸಾಧ್ಯವಿಲ್ಲ. ಆದುದರಿಂದ ಹೇ ಪ್ರಭು ಅಂಧರ ಊರುಗೋಲು ನೀವೇ ಆಗಿದ್ದೀರಿ ಎಂದು ಹಾಡುತ್ತಾರೆ. ಕಲಿಯುಗ ರಾತ್ರಿಯಲ್ಲಿ ಶಿವಬಾಬಾ ಬರುತ್ತಾರೆ. ಕೃಷ್ಣನು ಸಹ ರಾತ್ರಿಯಲ್ಲಿಯೇ ಜನ್ಮ ಪಡೆಯುತ್ತಾನೆಂದು ಹೇಳುತ್ತಾರೆ ಅಂದಾಗ ಶಿವನ ರಾತ್ರಿ ಅರ್ಥಾತ್ ಶಿವ ರಾತ್ರಿಯಲ್ಲಿ ಬರುತ್ತಾರೆಂದು ಅರ್ಥವಾಗುವುದು. ಈಗ ಶಿವ ಪರಮಾತ್ಮನಾಗಿರುವ ಕಾರಣ ಅವರ ರಾತ್ರಿಯಾವುದಾಗಿದೆ?

ನೀವು ತಿಳಿದುಕೊಂಡಿದ್ದೀರಿ - ಕಲಿಯುಗದ ಅಂತ್ಯ ಹಾಗೂ ಸತ್ಯಯುಗದ ಆದಿ ಸಮಯವನ್ನು ರಾತ್ರಿಯೆಂದು ಕರೆಯಲಾಗುವುದು. ಭಕ್ತಿ ಮಾರ್ಗದಲ್ಲಿ ತುಂಬಾ ಶ್ರಮ ಪಟ್ಟು ಮೋಸ ಹೋಗಿ ಓ ಪರಮಾತ್ಮ ನೀವು ಬೇಅಂತ್ ಆಗಿದ್ದೀರಿ ಅಥವಾ ನಾವೇ ಪರಮಾತ್ಮನೆಂದು ಹೇಳಿ ಬಿಡುತ್ತಾರೆ. ತಂದೆ ನಮಗೆ ಎಷ್ಟೊಂದು ತಿಳಿಸಿಕೊಡುತ್ತಾರೆ. ಕೆಲವು ಮಕ್ಕಳಿಗೆ ಸೇವೆಯಲ್ಲಿ, ತುಂಬಾ ಆಸಕ್ತಿ ಇರುತ್ತದೆ, ಈ ತಂದೆಗೂ ಸೇವೆ ಮಾಡಲು ತುಂಬಾ ಇಷ್ಟವಿದೆ ಆದರೆ ತಂದೆ ಮಕ್ಕಳಂತೆ ಹೋಗಿ ಸೇವೆ ಮಾಡಲು ನಿಯಮವಿಲ್ಲ. ನಾವು ಮಕ್ಕಳೇ ತಂದೆಯ ಸೇವೆಯನ್ನು ಮಾಡಿ ತಂದೆಯನ್ನು ಶೃಂಗಾರ ಮಾಡಬೇಕು. ತಂದೆಗೆ ಬಹಳ ಮಕ್ಕಳಿದ್ದಾರೆ. ಇನ್ನೂ ಅನೇಕ ಮಕ್ಕಳು ಬರುತ್ತಾ ಇರುವರು. ಹೊರಗಡೆ ಕ್ಯೂನಲ್ಲಿ ನಿಲ್ಲಬೇಕಾಗುತ್ತದೆ. ಹೇಗೆ ಪೋಪ್ ಬಂದಾಗ ಎಷ್ಟೊಂದು ಮನುಷ್ಯರು ಹೋಗುವರು, ಆದರೆ ಇವರಂತು ಸರ್ವರಿಗೂ ತಂದೆ ಆಗಿದ್ದಾರೆ. ಪೋಪ್ರವರಿಗೂ ಸದ್ಗತಿ ಕೊಡುವಂತಹವರು ತಂದೆಯೇ ಆಗಿದ್ದಾರೆ. ಸತ್ಯ-ಸತ್ಯ ಆಶೀರ್ವಾದ ಕೊಡುವಂತಹವರು ಒಬ್ಬ ತಂದೆ ಮಾತ್ರ. ಉಳಿದವರೆಲ್ಲರು ಅಸತ್ಯವಾದ ಆಶೀರ್ವಾದವನ್ನು ಮಾಡುವರು. ಬ್ರಹ್ಮಾಕುಮಾರ-ಕುಮಾರಿಯರಗಂತು ಎಲ್ಲರೂ ಆಶೀರ್ವಾದ ಮಾಡಬೇಕು. ಆದರೆ ತಿಳಿಯದ ಕಾರಣ ಬ್ರಹ್ಮಾಕುಮಾರ-ಕುಮಾರಿಯರೇ ಆಶೀರ್ವಾದ ಕೊಡುತ್ತಾರೆಂದು ತಿಳಿದುಕೊಂಡಿದ್ದಾರೆ. ಇಲ್ಲಿಗೆ ಯಾರೇ ಬಂದರೂ ಅವರು ಆಶೀರ್ವಾದ ಪಡೆಯಲು ಯೋಗ್ಯರೇ ಎಂದು ಪರಿಶೀಲನೆ ಮಾಡಬೇಕಾಗುತ್ತದೆ. ಪರಮಪಿತ ಪರಮಾತ್ಮನಲ್ಲಿರುವ ಜ್ಞಾನ ಬೇರೆ ಯಾರಲ್ಲೂ ಇಲ್ಲ. ಆದುದರಿಂದ ತಂದೆ ತಿಳಿಸುತ್ತಾರೆ ಇಲ್ಲಿಗೆ ಯಾರೇ ಬಂದರೂ ಸಹ ಅವರಿಗೆ ಮುಕ್ತಿ ಜೀವನ್ಮುಕ್ತಿ ಕೊಟ್ಟು ಮನುಷ್ಯರಿಂದ ದೇವತೆಗಳನ್ನಾಗಿ ಮಾಡೋಣವೆಂಬ ವಿಚಾರ ತಂದೆಯ ಬುದ್ಧಿಯಲ್ಲಿ ಬರುತ್ತದೆ. ಏಕೆಂದರೆ ಸ್ವರ್ಗದ ವೃಕ್ಷಾರೋಹಣವಂತೂ ಮಾಡಲೇಬೇಕು. ಯಾವ ರೀತಿಯಲ್ಲಿ ವೃಕ್ಷಾರೋಹಣ ನಡೆಯುತ್ತದೆ ಎಂದು ನಾವು ತಿಳಿದುಕೊಳ್ಳಬಹುದು. ನೀವೂ ಸಹ ಯಾರೇ ಬಂದರೂ ಅವರಿಗೆ ಮುಕ್ತಿ ಜೀವನ್ಮುಕ್ತಿ ನೀಡಬೇಕೆಂದು ತಿಳಿದುಕೊಳ್ಳಬೇಕು. ಸಾಮಾನ್ಯವಾಗಿ ಮುಕ್ತಿ ಬೇಕೆಂದು ಇಷ್ಟ ಪಡುತ್ತಾರೆ. ಒಳ್ಳೆಯದು. ಮುಕ್ತಿಧಾಮವನ್ನು ನೆನಪು ಮಾಡಿದಾಗ ಮುಕ್ತಿ ಸಿಗುತ್ತದೆ. ತಂದೆಯನ್ನು ನೆನಪು ಮಾಡುವುದರಿಂದ ಅಂತಿಮ ಮತಿ ಸೋ ಗತಿ ಆಗಿ ಬಿಡುತ್ತದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವ ಮಕ್ಕಳ ಪ್ರತಿ ಮಾತಾಪಿತಾ ಬಾಪ್ದಾದಾರವರ ನೆನಪು, ಪ್ರೀತಿ ಹಾಗೂ ಸುಪ್ರಭಾತ. ಆತ್ಮಿಕ ಮಕ್ಕಳಿಗೆ ಆತ್ಮಿಕ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಕೊನೆಪಕ್ಷ 8 ಗಂಟೆಯಾದರೂ ನೆನಪಿನ ಸೇವೆಯಲ್ಲಿರಬೇಕು. ಗೃಹಸ್ಥದಲ್ಲಿ ಜೊತೆಯಲ್ಲಿರುತ್ತಾ ಎಲ್ಲಾ ಸಂಗವನ್ನು ಬಿಟ್ಟು ಒಬ್ಬ ತಂದೆಯ ಸಂಗದಲ್ಲಿ ಸಂಬಂಧವನ್ನು ಜೋಡಿಸುವ ಶ್ರಮ ಪಡಬೇಕು.

2. ಮಂದ ಬುದ್ಧಿಯವರಾಗದೇ ತೀಕ್ಷ್ಣ ಬುದ್ಧಿಯುಳ್ಳ ವಿದ್ಯಾರ್ಥಿಗಳಾಗಬೇಕು. ತಂದೆಯ ಸಮಾನ ಕುರುಡರಿಗೆ ಊರುಗೋಲಾಗಿ ಎಲ್ಲರಿಗೂ ಮುಕ್ತಿ ಜೀವನ್ಮುಕ್ತಿಯ ಮಾರ್ಗವನ್ನು ತೋರಿಸಬೇಕು.

ವರದಾನ: ಅಲ್ಪಕಾಲದ ಆಶ್ರಯಗಳ ಆಧಾರವನ್ನು ಬಿಟ್ಟು ತಂದೆಯನ್ನು ಆಶ್ರಯದಾತನನ್ನಾಗಿ ಮಾಡಿಕೊಳ್ಳುವ ಯಥಾರ್ಥ

ಪುರುಷಾರ್ಥಿ ಭವ.

ಅಲ್ಪಕಾಲದ ಆಧಾರಗಳ ಆಶ್ರಯ, ಯಾವುದನ್ನು ಆಧಾರವನ್ನಾಗಿ ಮಾಡಿಕೊಂಡಿದ್ದೀರಿ, ಇದನ್ನೀಗ ಬಿಟ್ಟು ಬಿಡಿ. ಎಲ್ಲಿಯವರೆಗೆ ಈ ಆಧಾರಗಳಿವೆಯೋ ಅಲ್ಲಿಯವರೆಗೆ ಸದಾ ತಂದೆಯ ಆಶ್ರಯದ ಅನುಭವವಾಗಲು ಸಾಧ್ಯವಿಲ್ಲ ಹಾಗೂ ತಂದೆಯ ಆಶ್ರಯವಿರುವುದಿಲ್ಲ. ಆದ್ದರಿಂದ ಅಲ್ಪಕಾಲದ ಆಧಾರಗಳನ್ನೇ ಆಶ್ರಯವನ್ನಾಗಿ ಮಾಡಿಕೊಂಡು ಬಿಡುತ್ತೀರಿ. ಅಲ್ಪಕಾಲದ ಮಾತುಗಳು ಮೋಸ ಮಾಡುವವನಾಗಿದೆ ಆದ್ದರಿಂದ ಸಮಯದ ತೀವ್ರ ಗತಿಯನ್ನು ನೋಡುತ್ತಾ, ಈಗ ಆಧಾರಗಳಿಂದ ತೀವ್ರ ವೇಗದಿಂದ ಹಾರುತ್ತಾ ಸೆಕೆಂಡಿನಲ್ಲಿ ಅದನ್ನು ಪಾರು ಮಾಡಿದಾಗ ಹೇಳಲಾಗುತ್ತದೆ - ಯಥಾರ್ಥ ಪುರುಷಾರ್ಥಿ.

ಸ್ಲೋಗನ್: ಕರ್ಮ ಹಾಗೂ ಯೋಗದ ಸಮತೋಲನವನ್ನು ಇಡುವುದೇ ಸಫಲ ಕರ್ಮಯೋಗಿ ಆಗುವುದಾಗಿದೆ.